ಉಪ ವಿಭಾಗಾಧಿಕಾರಿಗಳ ಸಮ್ಮುಖದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಉಪವಿಭಾಗಾಧಿಕಾರಿಗಳು ತಹಸೀಲ್ದಾರರ ಆದೇಶವನ್ನು ರದ್ದುಗೊಳಿಸಿ ಆದೇಶ ನೀಡಿರುತ್ತಾರೆ. ತದನಂತರ, ಶ್ರೀ ಕೊಮಾರಿಗೌಡರು ಉಪವಿಭಾಗಾಧಿಕಾರಿಗಳ ಆದೇಶದ ವಿರುದ್ಧ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಜಿಲ್ಲಾಧಿಕಾರಿಗಳು ಉಪವಿಭಾಗಾಧಿಕಾರಿಗಳ ಆದೇಶವನ್ನು ರದ್ದುಗೊಳಿಸಿ ತಹಸೀಲ್ದಾರ್‌ರವರು ಸ್ಥಳ ಬದಲಾವಣೆ ಬಗ್ಗೆ ಸರ್ವೆ ನಂಬರನ್ನು ತಿದ್ದುಪಡಿ ಮಾಡಿ ನೀಡಿರುವ ಆದೇಶವನ್ನು ಎತ್ತಿ ಹಿಡಿದು ಆದೇಶ ಮಾಡಿರುತ್ತಾರೆ. ಹೀಗಾಗಿ ಕೊಮಾರಿ ಗೌಡರಿಗೆ ಮಂಜೂರಾಗಿರುವ ಜಮೀನು ೯ ಎಕರೆ ೩೬ ಗುಂಟೆ ಇದಕ್ಕೆ ಸಮನಾಗಿ ೪ ಹೆಕ್ಟೇರ್ ಆಗಿರುತ್ತದೆ. ಜಮೀನು ಮಂಜೂರಿ ನಂತರ ಪಕ್ಕ ಪೋಡಿ ಕಾಲದಲ್ಲಿ ಸರ್ವೆ ಇಲಾಖೆಯವರು ಮಂಜೂರಿ ಜಮೀನಿಗೆ ಹೊಸ ಸರ್ವೆ ನಂಬರನ್ನು ಕೊಟ್ಟು ದುರಸ್ತಿ ಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ. ಆದರಂತೆ, ಹೊಸ ಸರ್ವೆ ನಂಬರನ್ನು ಆಕಾರಬಂದು ಮತ್ತು ಗ್ರಾಮ ಲೆಕ್ಕಗಳಲ್ಲಿ ದಾಖಲೆ ಮಾಡಲಾಗುವುದು. ಜಮೀನಿನ ಎಕರೆಯನ್ನು ಹೆಕ್ಟೇರ್‌ಗಳಿಗೆ ನಿಗಧಿತವಾದ ಕೋಷ್ಠಕದಂತೆ ಪರಿವರ್ತಿಸಲಾಗುವುದು. ಕನ್ನಮಂಗಲ ಗ್ರಾಮದ ಸ. ನಂ. ೧೪೮ ಮತ್ತು ೧೪೯ರಲ್ಲಿ ಕ್ರಮವಾಗಿ ೪೭೦-೦೮ (ಎ. ಗುಂ) ಮತ್ತು ೫೯-೩೭ (ಎ. ಗುಂ) ವಿಸ್ತೀರ್ಣವಿರುತ್ತದೆ. ಈ ಪೈಕಿ ಸ. ನಂ. ೧೪೮ರಲ್ಲಿ ೪.೦೦ ಎಕರೆ ಜಮೀನನ್ನು ಶ್ರೀ ವಿ. ರಾಮುರವರಿಗೆ ಸಕ್ರಮಗೊಳಿಸಲಾಗಿದೆ. ಕಂದಾಯ ಇಲಾಖೆಯಿಂದ ಮಂಜೂರಿದಾರರಿಗೆ ಅನ್ಯಾಯವಾಗಿರುವುದಿಲ್ಲ. ಶ್ರೀ ರಾಮುರವರು ಅವರಿಗೆ ಮಂಜೂರಿಯಾಗಿರುವ ಜಮೀನಿನ ಸ್ವಾಧೀನಾನುಭವದಲ್ಲಿರುತ್ತಾರೆ. ಹಾಗೂ ಇತರೆಯವರಿಗೆ ಮಂಜೂರಿಯಾಗಿರುವ ಜಮೀನನ್ನು ಅತಿಕ್ರಮಿಸಿರುತ್ತಾರೆ. ಶ್ರೀ ರಾಮುರವರ ರಿವಿಷನ್ ಅರ್ಜಿ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಸಮ್ಮುಖದಲ್ಲಿ ತೀರ್ಪಿಗೆ ಬಾಕಿ ಇರುವುದರಿಂದ ಈ ಹಂತದಲ್ಲಿ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ.

ಶಾಸನ ರಚನಾ ಕಾರ್ಯಕಲಾಪಗಳು

೧೯೯೨ರ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿಗಾಗಿ ಕೋರಿಕೆ

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ೧೯೯೨ನೇ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಕಂದಾಯ ಸಚಿವರ ಪರವಾಗಿ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷಣೆಯವರು:- ಪ್ರಸ್ತಾವ ಏನೆಂದರೆ ''೧೯೯೨ರ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಡನೆಗೆ ಅನುಮತಿ ನೀಡಲಾಯಿತು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷಣೆಯವರೇ, ೧೯೯೨ನೇ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಕಂದಾಯ ಸಚಿವರ ಪರವಾಗಿ ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಣಿಯವರು:- *ಅನುಬಂಧ ವಿಧೇಯಕವನ್ನು ಮಂಡಿಸಲಾಗಿದೆ.

ಎತ್ತೀಯ ಕಾರ್ಯಕಲಾಪಗಳು.

೧೯೨೨-೨೩ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಉಪಾಧ್ಯಕ್ಷಣಿಯವರು:- ಈಗ ಮಾನ್ಯ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು ತಮ್ಮ ಇಲಾಖೆಯ ಬೇಡಿಕೆಗಳನ್ನು ಮಂಡಿಸಬೇಕು.

ಅಭಿಯಾಚನೆ ಕ್ರಮಾಂಕ ೫.

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು):- ಮಾನ್ಯ ಅಧ್ಯಕ್ಷಣಿಯವರೇ:- ''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳಿಗೆ (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದಿಂದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೯,೬೩,೭೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೬,೦೭,೬೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ.''

ಉಪಾಧ್ಯಕ್ಷಣಿಯವರು:- ಬೇಡಿಕೆಯನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ: ೬.

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ಖಾತೆ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೦೮,೦೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಣಿಯವರು:- ಬೇಡಿಕೆಯನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ: ೭

ಶ್ರೀ ನಜೀರ್ ಅಹಮದ್ (ಸಣ್ಣ ಕೈಗಾರಿಕೆ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ''ರಾಜಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦೬,೩೬,೧೧,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೯,೭೯,೮೪,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ''.

ಉಪಾಧ್ಯಕ್ಷಣಿಯವರು:- ಬೇಡಿಕೆಯನ್ನು ಮಂಡಿಸಲಾಯಿತು.